**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ –10

ಪಿ ಡಬ್ಲ್ಯೂ–10

| | | |
|---|---|---|
| **ಸಾಕ್ಷಿದಾರರ ಹೆಸರು** | : | ಹನುಮಂತಪ್ಪ |
| **ತಂದೆ/ಗಂಡನ ಹೆಸರು** | : | ಶಂಕ್ರಪ್ಪ ಪೂಜಾರ |
| **ವಯಸ್ಸು** | : | 42 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಹುಲ್ಲತ್ತಿ |

**ದಿನಾಂಕಃ 11–09–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು 3 ವರ್ಷದ ಹಿಂದೆ ರಾಣೇಬೆನ್ನೂರಿನ ಕೆ ಎಪ್ ಸಿ ಎಪ್ ಗೋಡಾನ್ ನಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದಾಗ ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ಒಂದು ಲಾರಿಯಲ್ಲಿ 335 ಅಕ್ಕಿ ಚೀಲಗಳನ್ನು ಲಾರಿಯಿಂದ ಕೆಳಗೆ ಇಳಿಸಲು ನನ್ನನ್ನು ಹಾಗೂ ಇನ್ನಿತರ ಕೆ ಎಪ್ ಸಿ ಎಪ್ ಹಮಾಲರಾದ ಚಾಸಾ–6,7,9,10 ರವರನ್ನು ಕರೆದರು. ಸದರಿ ಚೀಲವನ್ನು ಆರೋಪಿತ ಕಳುವು ಮಾಡಿಕೊಂಡು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದನು ಎಂದು ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ತಿಳಿಸಿದರು. ಸದರಿ ಚೀಲಗಳು 50 ಕೆಜಿಯ ಒಟ್ಟು 335 ಚೀಲಗಳು ಇದ್ದವು. ಆಗ ನಾವು ಅಕ್ಕಿ ಚೀಲಗಳನ್ನು ಕೆಳಗೆ ಇಳಿಸಿರುತ್ತೇವೆ. ಸದರಿ ಅಕ್ಕಿ ಕಳ್ಳತನದಿಂದ ತೆಗೆದುಕೊಂಡು ಬಂದ ಅಕ್ಕಿ ಎಂದು ಹೇಳಿರುತ್ತಾರೆ. ಸದರಿ ಅಕ್ಕಿ ಚೀಲಗಳನ್ನು ಗೋಡಾನ್ ನಲ್ಲಿ ಇಳಿಸಿರುತ್ತೇವೆ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ನನಗೆ ಆರೋಪಿತ ಗೊತ್ತಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಸಿ ಡಬ್ಲ್ಯೂ -10

ಪಿ ಡಬ್ಲ್ಯೂ-10

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ಆರೋಪಿತ ದಿನಾಂಕ 14-06-2022 ರಂದು ಲಾರಿಯಲ್ಲಿ ಪಡಿತರ ಅಕ್ಕಿಯನ್ನು ತುಂಬಿರುವ 334 ಚೀಲಗಳನ್ನು ಲೋಡ್ ಮಾಡಿಕೊಂಡು ಅಕ್ರಮವಾಗಿ ಸಾಗಾಣಿಕೆ ಮಾಡಿಕೊಂಡು ಹೋಗುತ್ತಿದ್ದಾಗ ಚಾಸಾ-1 ಹಾಗೂ ಇತರ ಕಂದಾಯ ಇಲಾಖಾ ಅಧಿಕಾರಿಗಳು ಹಿಡಿದು ಅದನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ಹೇಳಿಕೆಯನ್ನು ಈಗ ನಿ ಪಿ -7 ಎಂದು ಗುರುತಿಸಲಾಯಿತು. ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಕೆ ಎಫ್ ಸಿ ಎಸ್ ಗೋಡಾನ್ ನಲ್ಲಿ ಸುಮಾರು 11 ವರ್ಷಗಳಿಂದ ಖಾಯಂ ಆಗಿ ಹಮಾಲಿಯಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಚಾಸಾ-1 ರಿಂದ 4 ರವರು ಸದರಿ ಲಾರಿಯನ್ನು ಗೋಡಾನ್ ತಂದರು ಎಂದರೆ ನಿಜ. ಸದರಿ ಲಾರಿಯನ್ನು ಆರೋಪಿತ ಚಲಾಯಿಸಿಕೊಂಡು ಬಂದರು ಎಂದರೆ ನಿಜ. ಆರೋಪಿತ ಆ ಸಮಯದಲ್ಲಿ ಅಕ್ಕಿ ಚೀಲಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್ಲನ್ನು ಅಧಿಕಾರಿಗಳು ಹಾಗೂ ಆಹಾರ ನೀರಿಕ್ಷಕರಿಗೆ ತೋರಿಸುತ್ತಿದ್ದರು ಎಂದರೆ ನಿಜ. ರಶೀದಿ ತೋರಿಸಿ ಆರೋಪಿತ ಎನು ಮಾಡುತ್ತಿದ್ದ ಎಂದು ನನಗೆ ಗೊತ್ತು. ಗೋಡಾನ್ ಮ್ಯಾನೇಜರ್ ಗೆ ಆರೋಪಿತ ರಶೀದಿ ಬಿಲ್ಲುಗಳನ್ನು ತೋರಿಸುತ್ತಿದ್ದ ಎಂದರೆ ನಿಜ. ಚೀಲಗಳನ್ನು ಇಳಿಸುವಾಗ ಆರೋಪಿತ ಅಲ್ಲಿಯೇ ಇದ್ದರು ಎಂದರೆ ನಿಜ. ನಾನು ಪೋಲಿಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ನನಗೆ ಅದು ಯಾವ ಅಕ್ಕಿ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ರಾಣೇಬೆನ್ನೂರು.**

**ಸಿಸಿ ನಂಬರಃ 67/2024**

ಸಿ ಡಬ್ಲ್ಯೂ -6

ಪಿ ಡಬ್ಲ್ಯೂ-9

| | | |
|---|---|---|
| **ಸಾಕ್ಷಿದಾರರ ಹೆಸರು** | : | ರಮೇಶ |
| **ತಂದೆ/ಗಂಡನ ಹೆಸರು** | : | ಹನುಮಂತಪ್ಪ ಜ್ಯೋತೇರ |
| **ವಯಸ್ಸು** | : | 37 ವರ್ಷ |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ಹುಲ್ಲತ್ತಿ |

**ದಿನಾಂಕಃ 11-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

ನಾನು 3 ವರ್ಷದ ಹಿಂದೆ ರಾಣೇಬೆನ್ನೂರಿನ ಕೆ ಎಫ್ ಸಿ ಎಫ್ ಗೋಡಾನ್ ನಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದಾಗ ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ಒಂದು ಲಾರಿಯಲ್ಲಿ 335 ಅಕ್ಕಿ ಚೀಲಗಳನ್ನು ಲಾರಿಯಿಂದ ಕೆಳಗೆ ಇಳಿಸಲು ನನ್ನನ್ನು ಹಾಗೂ ಇನ್ನಿತರ ಕೆ ಎಫ್ ಸಿ ಎಫ್ ಹಮಾಲರಾದ ಚಾಸಾ-6,7,9,10 ರವರನ್ನು ಕರೆದರು. ಸದರಿ ಚೀಲವನ್ನು ಆರೋಪಿತ ಕಳುವು ಮಾಡಿಕೊಂಡು ಲಾರಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದನು ಎಂದು ತಹಶೀಲ್ದಾರ ಹಾಗೂ ಆಹಾರ ನೀರಿಕ್ಷಕರು ಹಾಗೂ ಪೋಲಿಸ್ ಇಲಾಖೆಯವರು ತಿಳಿಸಿದರು. ಸದರಿ ಚೀಲಗಳು 50 ಕೆಜಿಯ ಒಟ್ಟು 335 ಚೀಲಗಳು ಇದ್ದವು. ಆಗ ನಾವು ಅಕ್ಕಿ ಚೀಲಗಳನ್ನು ಕೆಳಗೆ ಇಳಿಸಿರುತ್ತೇವೆ. ಆಗ ನ್ಯಾಯಾಲಯದ ಮುಂದಿರುವ ಆರೋಪಿತ ಸ್ಥಳದಲ್ಲಿದ್ದರು. ಸದರಿ ಅಕ್ಕಿ ಕಳ್ಳತನದಿಂದ ತೆಗೆದುಕೊಂಡು ಬಂದ ಅಕ್ಕಿ ಎಂದು ಹೇಳಿರುತ್ತಾರೆ. ಸದರಿ ಅಕ್ಕಿ ಚೀಲಗಳನ್ನು ಗೋಡಾನ್ ನಲ್ಲಿ ಇಳಿಸಿರುತ್ತೇವೆ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ಅವರು ನಿವೇದಿಸಿಕೊಂಡಿದ್ದು ಸದರಿ ನಿವೇದನೆಯನ್ನು ಪರಿಗಣಿಸಿ ಸ.ಸ.ಅ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಸಿ ಡಬ್ಲ್ಯೂ -6

ಪಿ ಡಬ್ಲ್ಯೂ-9

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ`**

ಆರೋಪಿತ ದಿನಾಂಕ 14-06-2022 ರಂದು ಲಾರಿಯಲ್ಲಿ ಪಡಿತರ ಅಕ್ಕಿಯನ್ನು ತುಂಬಿರುವ 334 ಚೀಲಗಳನ್ನು ಲೋಡ್ ಮಾಡಿಕೊಂಡು ಅಕ್ರಮವಾಗಿ ಸಾಗಾಣಿಕೆ ಮಾಡಿಕೊಂಡು ಹೋಗುತ್ತಿದ್ದಾಗ ಚಾಸಾ-1 ಹಾಗೂ ಇತರ ಕಂದಾಯ ಇಲಾಖಾ ಅಧಿಕಾರಿಗಳು ಹಿಡಿದು ಅದನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ ಈ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ಹೇಳಿಕೆಯನ್ನು ಈಗ ನಿ ಪಿ -6 ಎಂದು ಗುರುತಿಸಲಾಯಿತು. ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತನ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

ನಾನು ಕೆ ಎಫ್ ಸಿ ಎಸ್ ಗೋಡಾನ್ ನಲ್ಲಿ ಸುಮಾರು 11 ವರ್ಷಗಳಿಂದ ಖಾಯಂ ಆಗಿ ಹಮಾಲಿಯಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಚಾಸಾ-1 ರಿಂದ 4 ರವರು ಸದರಿ ಲಾರಿಯನ್ನು ಗೋಡಾನ್ ತಂದರು ಎಂದರೆ ನಿಜ. ಸದರಿ ಲಾರಿಯನ್ನು ಆರೋಪಿತ ಚಲಾಯಿಸಿಕೊಂಡು ಬಂದರು ಎಂದರೆ ನಿಜ. ಆರೋಪಿತ ಆ ಸಮಯದಲ್ಲಿ ಅಕ್ಕಿ ಚೀಲಗಳನ್ನು ಖರೀದಿ ಮಾಡಿದ ಬಗ್ಗೆ ಬಿಲ್ಲನ್ನು ಅಧಿಕಾರಿಗಳು ಹಾಗೂ ಆಹಾರ ನೀರಿಕ್ಷಕರಿಗೆ ತೋರಿಸುತ್ತಿದ್ದರು ಎಂದರೆ ನಿಜ. ರಶೀದಿ ತೋರಿಸಿ ಆರೋಪಿತ ಎನು ಮಾಡುತ್ತಿದ್ದ ಎಂದು ನನಗೆ ಗೊತ್ತು. ಗೋಡಾನ್ ಮ್ಯಾನೇಜರ್ ಗೆ ಆರೋಪಿತ ರಶೀದಿ ಬಿಲ್ಲುಗಳನ್ನು ತೋರಿಸುತ್ತಿದ್ದ ಎಂದರೆ ನಿಜ. ಚೀಲಗಳನ್ನು ಇಳಿಸುವಾಗ ಆರೋಪಿತ ಅಲ್ಲಿಯೇ ಇದ್ದರು ಎಂದರೆ ನಿಜ. ನಾನು ಪೋಲಿಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ನನಗೆ ಅದು ಯಾವ ಅಕ್ಕಿ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.